ತಗುಲಿತ್ತು. ಮೂತ್ರ ತುಂಬಿದ ಪ್ಲಾಸ್ಟಿಕ್ ಚೀಲವೊಂದು ಮಂಚದಲ್ಲಿ ಸದಾ ನೇತಾಡುತಿತ್ತು. ಡಾ. ಹಾವುಜರ್ ಮತ್ತು ಇತರ ವೈದ್ಯರ ಮಾತುಗಳು ನನ್ನ ಕಿವಿಗೆ ಬಿದ್ದವು. ಅವರು ಮತ್ತೆ ಮತ್ತೆ 'ಯುರೇಮಿಯಾ' ಎಂಬ ಪದ ಬಳಸಿದರು. ಈ ಸ್ಥಿತಿ ತಿಳಿದುಕೊಂಡಾಗ ಸಾರ್ತ್ರ್‌ರನ್ನು ಉಳಿಸಿಕೊಳ್ಳುವುದು ಕಷ್ಟವೆಂದು ಅರಿವಾಗತೊಡಗಿತು. ಡಾ. ಹಾವುಜರ್ ಅವರನ್ನು ಅಪ್ಪಿಕೊಂಡು ನಾನು ಅಳತೊಡಗಿದೆ. ಸಾರ್ತ್ರರು ಹೀಗೆ ನರಳುವುದು ಮತ್ತು ಮಾನಸಿಕವಾಗಿ ಕುಗ್ಗುವುದನ್ನು ನನಗೆ ನೋಡಲಾಗಲಿಲ್ಲ. ನಾನು ಕೊನೆಗೆ ಅವರು ನೆಮ್ಮದಿಯಿಂದ ಸಾಯುವುದನ್ನು ಮಾತ್ರ ಈಗ ಅಪೇಕ್ಷಿಸಲು ಅವಕಾಶವಿತ್ತು. ಅವರ ಒಂದು ಮೂತ್ರಪಿಂಡದಲ್ಲಿ ಸರಿಯಾದ ರಕ್ತಪರಿಚಲನೆಯಾಗದೆ ಅದು ನಿಶ್ಚಲವಾಗಿತ್ತು. ಇನ್ನೊಂದು ಮೂತ್ರಪಿಂಡವನ್ನು ಉಳಿಸಿಕೊಳ್ಳಲು ಶಸ್ತ್ರಚಿಕಿತ್ಸೆ ನಡೆಸುವುದು ಅನಿವಾರ್ಯವಾಗಿತ್ತು. ಆದರೆ, ಇಂಥ ಎಲ್ಲ ನೋವುಗಳಿಂದ ಬಿಡುಗಡೆಗೊಳ್ಳಲು ಸಾಯುವುದೊಂದೇ ಅವರಿಗುಳಿದಿರುವ ದಾರಿಯಾಗಿತ್ತು.

ಕೆಲ ದಿನಗಳ ನಂತರ ಸಾರ್ತ್ರ್ ಹೇಳಿದರು: 'ಹಾಸಿಗೆಯಲ್ಲಿ ಮಲಗಿಯೇ ಇರುವುದರಿಂದ ದೇಹದ ಹಿಂಭಾಗದಲ್ಲಿ ಸಣ್ಣ ಸಣ್ಣ ಹುಣ್ಣುಗಳಾಗಿವೆ. ಹಾಸಿಗೆಯಲ್ಲಿ ರಕ್ತದ ಕಲೆಗಳು. ದಾದಿಯರು ಹುಣ್ಣುಗಳನ್ನು ಸ್ವಚ್ಛಗೊಳಿಸುವಾಗ ತುಂಬಾ ನೋವಾಗುತ್ತದೆ. ಕೆಂಪು ಮತ್ತು ಈ ನೀಲಿಗಾಯಗಳನ್ನು ನೋಡಲಾಗುವುದಿಲ್ಲ.'

ತಮ್ಮ ಮಂದವಾದ ಕಣ್ಣುಗಳಿಂದಲೇ ಸಾರ್ತ್ರ್ ತಮ್ಮ ಗಾಯಗಳನ್ನು ನೋಡಬಲ್ಲವರಾಗಿದ್ದರು. ನನಗೆ ಏನು ಹೇಳಬೇಕೊ ತಿಳಿಯಲಿಲ್ಲ. ಒಂದೆರಡೇ ದಿನಗಳಲ್ಲಿ ಅವರಿಗೆ ಗ್ಯಾಂಗ್ರಿನ್ ಆವರಿಸಿತು. ಒಂದೆರಡು ದಿನದ ತರುವಾಯ ತುಂಬಾ ಹೊತ್ತು ಹರಟೆ ಹೊಡೆದರು. ಪಾವುಲಿನ್ ಗ್ಲಾಸಿನಲ್ಲಿ ನೀರು ತಂದು ಸಾರ್ತ್ರ್‌ರಿಗೆ ಕುಡಿಸಿದ. ನೀರಿನ ಗ್ಲಾಸ್ ಹಿಡಿದುಕೊಂಡ ಸಾರ್ತ್ರ್, 'ಮುಂದಿನ ಸಲ ಡ್ರಿಂಕ್ಸ್ ಪಾರ್ಟಿ ನನ್ನ ಮನೆಯಲ್ಲಿ ಮಾಡೋಣ. ಆಗ ನನ್ನ ಕೈಯಲ್ಲಿ ನೀರಿರುವುದಿಲ್ಲ. ಬರೀ ವ್ಹಿಸ್ಕಿ ಇರುವುದು' ಎಂದು ನಕ್ಕರು. ಕೆಲ ಹೊತ್ತಿನ ನಂತರ ನನ್ನೆಡೆ ನೋಡಿ ಕೇಳಿದರು: 'ನನ್ನ ಶವಸಂಸ್ಕಾರ ಮಾಡಲು ಬೇಕಾದಷ್ಟು ಹಣ ನಿನ್ನ ಬಳಿ ಇದೆಯೆ?' ನಾನು ಇಂಥ ಮಾತಿಗೆ ವಿರೋಧ ಸೂಚಿಸಿ ಅಳತೊಡಗಿದೆ. ಸಾವಿನ ಹೊಸ್ತಿಲಲ್ಲಿ ನಿಂತಿರುವುದು ಅವರಿಗೂ ಗೊತ್ತಾಗಿತ್ತು. ಅವರ ಬೌದ್ಧಿಕ ಸಾಹಸಗಳು ಶರೀರದ ಅಸ್ವಸ್ಥತೆ ಎದುರು ಮಂಡಿಯೂರಿದ್ದವು. ಅಂದು ನನ್ನನ್ನು ಹತ್ತಿರ ಕರೆದು ಚುಂಬಿಸಿ ಕಿವಿಯಲ್ಲಿ ಉಸುರಿದರು: 'ನಿನ್ನನ್ನು ತುಂಬಾ ಪ್ರೀತಿಸುವೆ...'

### ವಿಕ್ರಂ ವಿಸಾಜಿ

ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು. ಮೂಲತಃ ಬೀದರ ಜಿಲ್ಲೆಯ ಭಾಲ್ಕಿಯವರಾದ ವಿಕ್ರಂ, ಕಲಬುರ್ಗಿಯ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ.

'ತಮಾಷಾ', 'ಗ್ರೀಕ್ ಹೊಸ ಕಾವ್ಯ', 'ರಕ್ತ ವಿಲಾಪ', 'ಬಿಸಿಲ ಕಾಡಿನ ಹಣ್ಣು', 'ರಸಗಂಗಾಧರ', 'ಮತ್ತೆ ಬಂತು ಶ್ರಾವಣ', 'ನಾದಗಳು ನುಡಿಯಾಗಲೀ', 'ಮಿರ್ಜಾ ಗಾಲಿಬ್ ಜೊತೆ ಒಂದು ಮಾತುಕತೆ' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ.